**ದಿನಾಂಕಃ 03.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಎಂ ಎಸ್ ಎಂ., ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಯು ಕನ್ನಡ ಭಾಷೆ ಬರುವುದಿಲ್ಲ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದರಿಂದ ಕನ್ನಡ ಮತ್ತು ತೆಲುಗು ಭಾಷೆ ತಿಳಿದಿರುವ ಶ್ರೀ ಸಿ ಎಂ ಎನ್., ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು. ಭಾಷಾ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**8.** ವೆಂಕಟಸ್ವಾಮಿ ತೀರಿಕೊಂಡು ಎಷ್ಟು ವರ್ಷಗಳಾಯಿತು ಎಂದು ಹೇಳಲು ಬರುವುದಿಲ್ಲ ಕಾರಣ ಬಹಳ ವರ್ಷಗಳಾಗಿರುತ್ತವೆ. ಸದರಿಯವರದ್ದು ಮರಣ ಪ್ರಮಾಣ ಪತ್ರ ಇರುವುದಿಲ್ಲ. ವೆಂಕಟಸ್ವಾಮಿಯ ಹೆಸರಿಗೆ ಎಷ್ಟನೇ ಇಸವಿಯವರೆಗೆ ಪಹಣಿಗಳು ಬರುತ್ತಿದ್ದವು ಎಂದು ಹೇಳಲು ಬರುವುದಿಲ್ಲ. ನಿಪಿ–11 ರಲ್ಲಿ ನಮೂದು ಇರುವ ವೆಂಕಟೇಶಪ್ಪ ಬಿನ್ ಮುನಿವೆಂಕಟರಾಮಪ್ಪ ನನಗೆ ಚಿಕ್ಕಪ್ಪನ ಮಗನಾಗಬೇಕು. ಅಂತ ಹೆಸರಿನವರು ಯಾರು ಇರುವುದಿಲ್ಲ ನಿಪಿ–11 ನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.

**9.** ಜಿಂಕೆ @ ಜಿಂಕಲ ವೆಂಕಟಸ್ವಾಮಿ, ವೆಂಕಟಪ್ಪ ಹಾಗೂ ಮುನಿಸ್ವಾಮಿ ರವರ ನಡುವೆ ಬಾಯಿ ಮಾತಿನ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ಮೇಲಿನ 3 ಜನರು ಬೋಡಪ್ಪ ಹಾಗೂ ರಾಮಕ್ಕನವರ ಮಕ್ಕಳು ಎಂದರೆ ಸರಿಯಲ್ಲ. ಸದರಿ ಬಾಯಿ ಮಾತಿನ ವಿಭಾಗದಲ್ಲಿ ಜಿಂಕೆ @ ಜಿಂಕಲ ವೆಂಕಟಸ್ವಾಮಿ ಹಾಗೂ ವೆಂಕಟಪ್ಪನಿಗೆ 1 ಎಕರೆ 31 ಗುಂಟೆ ಜಮೀನು ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಮುನಿಸ್ವಾಮಿಗೆ 2 ಎಕರೆ ಜಮೀನು ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಅಂದಿನಿಂದ ಮುನಿಸ್ವಾಮಿ ರವರೇ 2 ಎಕರೆ ಜಮೀನಿನಲ್ಲಿ ಸ್ವಾಧಿನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಮುಟೇಶನ್ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

**10.** ದಿ. 21.01.1960 ರಲ್ಲಿ 1 ನೇ ಪ್ರತಿವಾದಿಯ ತಂದೆ ಕೃಷ್ಣಪ್ಪನಿಗೆ ಮುನಿಸ್ವಾಮಿ ತನ್ನ ಭಾಗದ 2 ಎಕರೆ ಜಮೀನನ್ನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿ–14 ರಂತೆ ಮುಟೇಶನ್ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಮಗ ಎಂದು ಹೇಳುವ ವೆಂಕಟೇಶ್ ರವರು ಕೊಟ್ಟಿರುವಂತಹ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮಾರಾಟ ಆದಾಗಿನಿಂದ ಕೃಷ್ಣಪ್ಪ ರವರೇ ಸ್ವಾಧಿನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ

ಕೃಷ್ಣಪ್ಪ ರವರ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಗಿ ಬರುತ್ತಿವೆ ಎಂದರೆ ಸಾಕ್ಷಿಯೂ ನಾವು ಲೋಕ್ ಅದಾಲತ್ ನಲ್ಲಿ ರಾಜಿ ಮಾಡಿಕೊಳ್ಳಲು ಹೋದಾಗ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವ ಬಗ್ಗೆ ಗೊತ್ತಾಯಿತು ಎಂದು ನುಡಿಯುತ್ತಾರೆ.

**11.** ಚಂಗರೆಡ್ಡಿ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಚಂಗರೆಡ್ಡಿ 1 ನೇ ಪ್ರತಿವಾದಿ ರಾಜು ರವರ ಅಣ್ಣ ಹಾಗೂ ಕೃಷ್ಣಪ್ಪನ ಹಿರಿಯ ಮಗ ಎಂದರೆ ಸರಿಯಲ್ಲ. ಚಂಗರೆಡ್ಡಿ ತೀರಿಕೊಂಡ ನಂತರ 1 ನೇ ಪ್ರತಿವಾದಿ ರಾಜು ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಚಂಗರೆಡ್ಡಿ ರವರು 2018 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ರಾಜು ರವರ ಹೆಸರಿಗೆ ಪಹಣಿ ಬಂದ ನಂತರ ಅವರು ಬ್ಯಾಂಕಿನಲ್ಲಿ ಕೃಷಿ ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಕಂದಾಯ ಕಟ್ಟಿರುತ್ತೇನೆಂದು ತೋರಿಸಲು ರಸೀದಿಗಳನ್ನು ಹಾಜರು ಪಡಿಸಿರುತ್ತೇನೆ.

**12.** 1 ನೇ ವಾದಿ ನನ್ನ ತಂದೆಯಾಗಿರುವುದಿಲ್ಲ ಹಾಗೂ 2 ನೇ ವಾದಿ ನನ್ನ ಚಿಕ್ಕಪ್ಪನಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ವಜಮೀನುಗಳ ಬೆಲೆ ಜಾಸ್ತಿಯಾಗಿರುವುದರಿಂದ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದನೆಂದರೆ ಸರಿಯಲ್ಲ.

**13.** ನಾನು ಮುಳಬಾಗಿಲು ತಾಲೂಕಿನ ಕಂಬಂ ದಿನ್ನೆ ಗ್ರಾಮದ ವಾಸಿಯಾಗಿರುವುದಿಲ್ಲ ಆದ್ದರಿಂದ ನನಗೆ ಕನ್ನಡ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನ ವೆಂಕಟೇಶ್ ಎಂಬುವವರು ನನ್ನನ್ನು ಎತ್ತಿಕಟ್ಟಿ ಪ್ರತಿವಾದಿಯವರ ವಿರುದ್ಧ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವೆಂಕಟೇಶ್ ರವರೇ ನನಗೆ ಎಲ್ಲಾ ದಾಖಲೆಗಳನ್ನು ಒದಗಿಸಿ ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.